ಸಂಪಾದಕೀಯ

# ಮಕ್ಕಳಿಗೆ ಏನನ್ನು ಹೇಳಬೇಕು?

ಇತ್ತೀಚೆಗೆ ಅಮೆರಿಕದ ಪ್ರಸಿದ್ಧ ಶಿಕ್ಷಣಸಂಸ್ಥೆಯೊಂದರಲ್ಲಿ ನಡೆದ ಅಮಾನವೀಯ ಹತ್ಯೆಯನ್ನು ಕುರಿತು ಅನೇಕ ವರದಿಗಳು ಪ್ರಕಟವಾಗಿವೆಯಷ್ಟೆ. ಹಿಂಸೆಯಲ್ಲಿ ತೊಡಗಿದ ವಿದ್ಯಾರ್ಥಿಯ ಮನಸ್ಸಿನಲ್ಲೇನಿತ್ತು? ಇತರರನ್ನು ದ್ವೇಷಿಸುವ ಪ್ರವೃತ್ತಿ ಅವನಲ್ಲಿ ಏಕೆ ತಲೆದೋರಿತು? ಆಧುನಿಕ ರೀತಿನೀತಿಗಳ ವಿರುದ್ಧ, ಸ್ವಚ್ಛಂದತೆಯ ವಿರುದ್ಧ ತೀವ್ರವಾದ ಪ್ರತಿಕ್ರಿಯೆಯನ್ನು ಅವನು ವ್ಯಕ್ತಪಡಿಸಿದ್ದ. ತನ್ನ ಸ್ನೇಹಿತೆ ಮತ್ತೊಬ್ಬನೊಂದಿಗೆ ಮಾತನಾಡುತ್ತಿದ್ದುದನ್ನು ಕಂಡು ಅಸಹನೆಯಿಂದ ವರ್ತಿಸಿ, ಲೈಂಗಿಕತೆಗೇ ಪ್ರಾಧಾನ್ಯವನ್ನು ನೀಡುವ ಸಂಸ್ಕೃತಿಯ ವಿರುದ್ಧ ದ್ವೇಷ ಕಾರಿದ, ಅಮಾಯಕರನ್ನು ಕೊಂದುಹಾಕಿದ. ಈತ ನಿಷೇಧಾತ್ಮಕ ಭಾವನೆಯಿಂದ ಪ್ರಚೋದಿತನಾಗಿ ಖಿನ್ನತೆಯನ್ನು ಅನುಭವಿಸುತ್ತಿದ್ದ. ಆದ್ದರಿಂದ ಇದು ಅಪರೂಪವಾದ ಸನ್ನಿವೇಶವೆಂದು ಉಪೇಕ್ಷಿಸಲಾದೀತೆ? ಇಂತಹ ಭೀಕರ ಘಟನೆಗಳು ಮುಂದೆ ಆಗದಂತೆ ಎಚ್ಚರ ವಹಿಸಿ, ಸುಧಾರಣೆಗಳನ್ನು ತರುವುದು ಉಚಿತವಲ್ಲವೆ? ಘಟನೆ ಅಹಿತಕರವೆಂದು ಮರೆಯುವುದಕ್ಕಿಂತ ಅದರ ಪರಿಣಾಮವು ಸಮಾಜದ ಹಿತಕ್ಕೆ ನಾಂದಿಯಾಗುವಂತೆ ಕ್ರಮಗಳನ್ನು ಕೈಗೊಳ್ಳಬೇಕಲ್ಲವೆ?

## ಶಿಕ್ಷಣ ಮನೆಯಿಂದ ಪ್ರಾರಂಭವಾಗಲಿ

ಇಂತಹ ಘಟನೆಗಳು ಸಂಭವಿಸಿದಾಗ ಮಾಧ್ಯಮಗಳ ಮೂಲಕ ಪ್ರಚಾರವಾಗುತ್ತಿರುವ ಲೈಂಗಿಕ ಸಂಸ್ಕೃತಿಯ ವಿರುದ್ಧವೋ, ಸರಿಯಾದ ಮಾರ್ಗದರ್ಶನವನ್ನು ನೀಡದ ತಂದೆತಾಯಿಯರ ವಿರುದ್ಧವೋ, ಅಧಾರ್ಮಿಕ ಪ್ರವೃತ್ತಿಯಿಂದ ಕೂಡಿರುವ ಕಲಿಕಾಲವಿದು ಎಂದು ಅದರ ವಿರುದ್ಧ ಆಕ್ರೋಶ ವ್ಯಕ್ತಪಡಿಸುವುದು ಕೇಳಿಬರುತ್ತದೆ. ಅಶ್ಲೀಲ ಸಂದೇಶಗಳನ್ನು ಬಿತ್ತರಿಸುವ ಮಾಧ್ಯಮಗಳು, ಸರಕುಗಳನ್ನು ಮಾರಲು ಅಶ್ಲೀಲ ಚಿತ್ರಗಳನ್ನು ಬಳಸುವ ಜಾಹಿರಾತುಗಳು, ಟಿ.ವಿ. ಧಾರಾವಾಹಿಗಳು ಇವೆಲ್ಲ ವ್ಯಕ್ತಿಯ ಸುಪ್ತ ಮನಸ್ಸಿನ ಮೇಲೆ ಅಳಿಸಲಾಗದ ಪ್ರಭಾವವನ್ನು ಬೀರುತ್ತವೆ. ಮನೆಗೆ ಬರುವ ಸಿನಿಮಾಪತ್ರಿಕೆಗಳು ಹಾಗೂ ದೂರದರ್ಶನದಲ್ಲಿ ಪ್ರಸಾರವಾಗುವ ಚಿಕ್ಕಮಕ್ಕಳ ವಯೋಮಾನಕ್ಕೆ ಉಚಿತವಲ್ಲದ ಪ್ರಣಯ ದೃಶ್ಯಗಳು ಮುಗ್ಧಮನಸ್ಸಿನ ಮೇಲೆ ಎಂತಹ ದುಷ್ಪ್ರಭಾವ ಬೀರಬಲ್ಲವು ಎಂಬುದರ ಸೂಕ್ಷ್ಮತೆಯನ್ನು ಅನೇಕ ತಂದೆತಾಯಿಯರು ಅರಿತಿರುವುದಿಲ್ಲ. ಇತ್ತೀಚೆಗೆ ದೂರದರ್ಶನದಲ್ಲಿ ಪ್ರಸಾರಗೊಂಡ ಎಳೆಯ ಮಕ್ಕಳ ಗಾಯನ ಸ್ಪರ್ಧೆಯ ಮೇಲ್ವಿಚಾರಕರಾಗಿದ್ದ ಒಬ್ಬ ಖ್ಯಾತ ಹಿನ್ನೆಲೆ ಗಾಯಕರು ಆಕ್ಷೇಪಿಸಿದರಂತೆ: "ವಯಸ್ಸಿಗೆ ಬಾರದ ಎಳೆಯ ಮಕ್ಕಳ ಬಾಯಿಂದ ಪ್ರೀತಿ, ಪ್ರಣಯಗಳ ಹಾಡುಗಳನ್ನು ಕೇಳಲು ಮುಜುಗರವಾಗುತ್ತದೆ. ಅವರು ಹಾಡುತ್ತಿರುವ ಸಾಹಿತ್ಯದ ಅರ್ಥ ಅವರಿಗಾಗಿಲ್ಲ, ಹಾಡಿನಲ್ಲಿಯೂ ಭಾವವಿಲ್ಲ. ಪ್ರಕೃತಿಯ ಸೊಬಗಿನ ಬಗ್ಗೆಯೋ, ದೇಶದ ಹಿರಿಮೆಯ ಬಗ್ಗೆಯೋ, ದೇವರಗೀತೆಗಳನ್ನೋ, ವಚನಗಳನ್ನೋ ತಾಯಿ ತಂದೆಯರು ಏಕೆ ಹೇಳಿಕೊಡುವುದಿಲ್ಲ?"

ಶಿಕ್ಷಣವು ಮೊದಲು ಮನೆಯಿಂದ ಪ್ರಾರಂಭವಾಗುತ್ತದೆ ಎಂಬುದನ್ನು ಅನೇಕ ಕುಟುಂಬಗಳು ಮರೆತಂತಿದೆ. ವ್ಯಕ್ತಿಯು ಪ್ರತಿಯೊಂದು ಸಂದರ್ಭದಲ್ಲೂ ಇಂದ್ರಿಯಗಳ ಮೂಲಕ ಸಂವೇದನೆಗಳನ್ನು ಗ್ರಹಿಸುತ್ತಿರುತ್ತಾನೆ. ಆಯಾ ವಿಚಾರಗಳು ತನಗೆ ಹಿತವೋ, ಅಹಿತವೋ ಎಂದು ನಿರ್ಧರಿಸುವ ಸಾಮರ್ಥ್ಯವನ್ನು ಅವನು ಮೂಲತಃ ಕಲಿಯುವುದು ತನ್ನ ಹಿರಿಯರ, ನೆರೆಹೊರೆಯವರ ಉದಾಹರಣೆಗಳಿಂದ. ಆದ್ದರಿಂದ ಮನೆಯೇ ಮೊದಲ ಪಾಠಶಾಲೆಯೆಂಬ ಮಾತು ಸದಾ ಸತ್ಯ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಮಾಡುತ್ತ ಯುವಕರಾಗಿ ಮೋಜಿನ ಜೀವನವನ್ನು ರೂಢಿಸಿಕೊಂಡವರು ಇದ್ದಕ್ಕಿದ್ದಂತೆ ತಾಯಿತಂದೆಯರಾದಾಗ ಅಂತಹ ಗುರುತರವಾದ ಜವಾಬ್ದಾರಿಯನ್ನು ನಿಭಾಯಿಸುವ ಸಾಮರ್ಥ್ಯ ಇರಬೇಕಲ್ಲವೇ? ಕೇವಲ ಶಾಲೆಗೆ ಕಳಿಸಿದರೆ ಸಾಕು, ನಾವಿನ್ನು ಕೈತೊಳೆದುಕೊಂಡೆವು ಎನ್ನುವವರ ಮಕ್ಕಳು ಶಿಕ್ಷಣವನ್ನೂ ಪಡೆಯುವುದಿಲ್ಲ, ವ್ಯಕ್ತಿತ್ವವನ್ನೂ ಬೆಳೆಸಿಕೊಳ್ಳುವುದಿಲ್ಲ. ಶಾಲೆಯ ಪಠ್ಯಪುಸ್ತಕಗಳ ಜೊತೆಗೆ ಪ್ರೀತಿಯ ಸಲಹೆ, ಆರೈಕೆಯ ಹಿತನುಡಿಗಳೂ ಅತ್ಯಗತ್ಯ. ಇವು ವ್ಯಕ್ತಿಗೆ ಭಾವನಾತ್ಮಕ ಪ್ರೌಢಿಮೆಯನ್ನು ನೀಡುತ್ತವೆ.

## ಶಿಕ್ಷಕರ ಕರ್ತವ್ಯ

ಶಾಲೆಗೆ ಬರುವ ಮಕ್ಕಳಿಗೆ ಸರಿಯಾದ ಮಾರ್ಗದರ್ಶನವನ್ನು ನೀಡುವುದು ಶಿಕ್ಷಕರ ಕರ್ತವ್ಯ. ಮನೆಯ ವಾತಾವರಣದಿಂದ ಇದ್ದಕ್ಕಿದ್ದಂತೆ ಶಾಲೆಯ ವಾತಾವರಣಕ್ಕೆ ಬರುವ ಮಕ್ಕಳ ಮನಸ್ಸಿನಲ್ಲಿ ನಾನಾ ಬಗೆಯ ಆತಂಕಗಳಿರುತ್ತವೆ. ಶಿಸ್ತಿನ ವಾತಾವರಣವು ಕೆಲವೊಮ್ಮೆ ಭಯವನ್ನು ಉಂಟುಮಾಡಬಲ್ಲದು. ಅದರ ವಿರುದ್ಧ ಪ್ರತಿಭಟಿಸುತ್ತ ಮಗುವು ಅಂತರ್ಮುಖಿಯಾಗಲು ಪ್ರಯತ್ನಿಸಬಹುದು. ಇಲ್ಲವೇ ಎಲ್ಲವನ್ನೂ ವಿರೋಧಿಸುವ ಪ್ರವೃತ್ತಿಯನ್ನು ರೂಢಿಸಿಕೊಳ್ಳಬಹುದು. ಶಾಲೆಯ ವಾತಾವರಣವು ಉಸಿರುಕಟ್ಟಿಸುವ ಬದಲು ವಿದ್ಯೆಯನ್ನು ಗಳಿಸುವುದಕ್ಕೆ ಪೂರಕವಾಗಿರಬೇಕು. ಆದ್ದರಿಂದಲೇ ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಆಟಿಕೆಗಳನ್ನು,

"ಯಾರಾದರೊಬ್ಬರು ಕೆಲವು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಕೆಲವು ಚೆನ್ನಾದ ಉಪನ್ಯಾಸಗಳನ್ನು ಕೊಟ್ಟರೆ, ಅವರು ತುಂಬಾ ವಿದ್ಯಾವಂತರು ಎಂದು ಭಾವಿಸುವಿರಿ. ಜನಸಾಧಾರಣರಿಗೆ ಜೀವನದ ಹೋರಾಟಕ್ಕೆ ಸಹಾಯ ಮಾಡದ, ಚಾರಿತ್ರ್ಯಶುದ್ಧಿಗೆ ಸಹಾಯ ಮಾಡದ, ಪರೋಪಕಾರ ಬುದ್ಧಿಯನ್ನು ಹುಟ್ಟಿಸದ, ಸಿಂಹಸದೃಶವಾದ ಧೈರ್ಯವನ್ನು ನೀಡದ ವಿದ್ಯಾಭ್ಯಾಸದಿಂದ ಪ್ರಯೋಜನವೇನು? ನಿಜವಾದ ವಿದ್ಯೆ ಒಬ್ಬನನ್ನು ಸ್ವಾವಲಂಬಿಯಾಗಿ ಮಾಡಬೇಕು. ನಿಮಗೆ ಶಾಲೆ ಕಾಲೇಜುಗಳಲ್ಲಿ ದೊರೆಯುತ್ತಿರುವ ವಿದ್ಯೆಯಿಂದ ಅಜೀರ್ಣರೋಗಗ್ರಸ್ಥರ ಗುಂಪಿಗೆ ಸೇರಿರುವಿರಿ. ನೀವು ಕೇವಲ ಯಂತ್ರದಂತೆ ಕೆಲಸ ಮಾಡುತ್ತ ಶುದ್ಧ ಸೋಮಾರಿಗಳಾಗುವಿರಿ." - ಸ್ವಾಮಿ ವಿವೇಕಾನಂದ

ರಂಗುರಂಗಿನ ಪುಸ್ತಕಗಳನ್ನು ಶಾಲೆಗಳಲ್ಲಿ ಒದಗಿಸುತ್ತಿದ್ದಾರೆ. ಓದು, ಸ್ಪರ್ಧೆಗಳ ಒತ್ತಡವನ್ನು ಸಹಿಸುವ ಮನಃಸ್ಥಿತಿಯನ್ನು ಮಕ್ಕಳಲ್ಲಿ ತಯಾರಿಸುವುದೇ ಶಿಕ್ಷಕನ ಮೂಲಕರ್ತವ್ಯ. ಆಗ ಮಗುವು ಸಹಜವಾಗಿಯೇ ತನ್ನಲ್ಲಿರುವ ಪ್ರತಿಭೆಯನ್ನು ವ್ಯಕ್ತಪಡಿಸಲು ಮುಂದಾಗುವುದು.

ಒಂದು ಜನಾಂಗದ, ನಾಡಿನ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವಲ್ಲಿ ಶಿಕ್ಷಕನದು ಪ್ರಮುಖವಾದ ಪಾತ್ರ. ಸ್ವಾತಂತ್ರ್ಯದ ಸಂಗ್ರಾಮಕ್ಕೆ ಬೇಕಾಗಿದ್ದ ಯೋಧರನ್ನು ತಯಾರಿಸಿ, ಅವರಲ್ಲಿ ನಾಡಿನ ಬಗ್ಗೆ ಪ್ರೀತಿ ಹಾಗೂ ನಾಡಿಗಾಗಿ ತ್ಯಾಗ ಮನೋಭಾವನೆಯನ್ನು ಬಿತ್ತಿದ ಹಲವಾರು ಶಿಕ್ಷಕರು ನಮ್ಮ ಶಾಲೆಗಳಲ್ಲಿರಲಿಲ್ಲವೇ? ತಮ್ಮ ಒಂದು ಮಾತಿನಿಂದ, ನಡೆಯಿಂದ ಅಗಾಧವಾದ ಪರಿಣಾಮವನ್ನು ಶಿಕ್ಷಕರು ಮುಗ್ಧಮನಸ್ಸುಗಳ ಮೇಲೆ ಬೀರಬಲ್ಲರು. ನಿರಂತರವಾಗಿ ಹೊಸ ವಿಚಾರಗಳನ್ನು ಸಂಗ್ರಹಿಸುತ್ತ, ಸಮರ್ಪಕವಾಗಿ ಅವನ್ನು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸುತ್ತ, ಸಮಾಜದಲ್ಲಿ ಹೊಸ ವಿಚಾರಗಳಿಗೆ, ಚಿಂತನೆಗಳಿಗೆ ಅನುವು ಮಾಡಿಕೊಡುವುದು ಶಿಕ್ಷಕರ ಕರ್ತವ್ಯ. ದೇಶದ ಪ್ರಗತಿಯಾಗಬೇಕಾದರೆ, ನಿಷ್ಠೆಯುಳ್ಳ ಜವಾಬ್ದಾರಿಯುತ ನಾಗರಿಕರ ತಯಾರಾಗಬೇಕಾದರೆ ಮೊದಲು ಶಿಕ್ಷಕರ ತರಬೇತಿಯಾಗಬೇಕಿದೆ. ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸದೆ ಕೇವಲ ವಿದೇಶಿ ಸಂಸ್ಕೃತಿಯನ್ನು ಪ್ರಶಂಸಿಸುತ್ತ, ನಮ್ಮ ದೇಶದ ಇತಿಹಾಸ, ಪರಂಪರೆಯ ಬಗ್ಗೆ ತಿರಸ್ಕಾರ ಮನೋಭಾವವನ್ನೇ ಹೊತ್ತ ಶಿಕ್ಷಕರು, ಸಂಸ್ಕೃತಿಯ ಉತ್ತಮ ವಾಹಕರಾಗಬಲ್ಲರೇ?

### ಕೇವಲ ಹಣ ಗಳಿಸುವ ವಿದ್ಯೆ ಬೇಡ

ಇಂದಿನ ತಾಂತ್ರಿಕ ದಿನಮಾನಗಳಲ್ಲಿ ಸಂಶೋಧನೆ ಹಾಗೂ ಜ್ಞಾನಶಾಖೆಗಳ ಅಧ್ಯಯನದಲ್ಲಿ ಆಸಕ್ತಿ ಕಡಿಮೆಯಾಗುತ್ತಿರುವುದನ್ನು ಶಿಕ್ಷಣತಜ್ಞರು ಗುರುತಿಸಿದ್ದಾರೆ. ಮಾಹಿತಿ ತಂತ್ರಜ್ಞಾನವನ್ನು ಕಲಿತವರಿಗೆ ಸುಲಭವಾಗಿ ಉದ್ಯೋಗ ದೊರೆಯುತ್ತಿರುವುದು, ಹೆಚ್ಚಿನ ಸಂಬಳದೊಂದಿಗೆ ವಿದೇಶಗಳ ಪ್ರಯಾಣವೂ ಅದರೊಂದಿಗೆ ಸೇರಿಕೊಂಡಿರುವುದೇ ಇದಕ್ಕೆ ಕಾರಣವೆಂದು ಕೆಲವರ ಅಭಿಪ್ರಾಯ. ಮಾಹಿತಿ ತಂತ್ರಜ್ಞಾನದಲ್ಲಿ ಇರುವ ಅಗಾಧ ಸಾಧ್ಯತೆಗಳು, ಅದರ ವ್ಯಾಪಕ ಬಳಕೆ ಹಾಗೂ ತನ್ಮೂಲಕ ದೊರೆಯುವ ಸಂತೃಪ್ತಿಯೇ ಈ ಉದ್ಯೋಗ ವಲಸೆಗೆ ಕಾರಣವೆಂದು ಮತ್ತೆ ಕೆಲವರ ಅಭಿಪ್ರಾಯ. ಏನೇ ಇರಲಿ, ಹೊಸ ವಿಚಾರಗಳು ಆಧುನಿಕತೆಯ ಪ್ರತೀಕವಾದ್ದರಿಂದ, ತಾಂತ್ರಿಕತೆ ತನ್ನ ದೈನಂದಿನ ಪ್ರಯೋಜನದಿಂದ ಈಗ ಆಕರ್ಷಕವಾಗಿದೆ. ಸಂಶೋಧನೆಯಿಲ್ಲದೆ ತಾಂತ್ರಿಕ ವಿಧಾನಗಳಿಗೆ ಭದ್ರವಾದ ಅಡಿಪಾಯ ವಿರುವುದಿಲ್ಲ. ಆದ್ದರಿಂದ ಸಂಶೋಧನೆಯಲ್ಲಿ ಒಲವನ್ನು ಮೂಡಿಸಿ ರಾಷ್ಟ್ರದ ಆರ್ಥಿಕ ಪ್ರಗತಿಯೊಂದಿಗೆ ಬೌದ್ಧಿಕ ಪ್ರಗತಿಯನ್ನೂ ಕಾಪಾಡುವುದು ಶಿಕ್ಷಕರ ಕರ್ತವ್ಯ. ಸಾಮಾನ್ಯ ಪ್ರವೇಶ ಪರೀಕ್ಷೆಗೆ ತರಬೇತಿ ನೀಡುವತ್ತ ಗಮನ ಹರಿಸುವ ಶಿಕ್ಷಕರು ಹಾಗೂ ಇದಕ್ಕಾಗಿ ವಿಶೇಷ ಕೋಚಿಂಗ್ ಕ್ಲಾಸ್‌ಗಳನ್ನು ನಡೆಸುತ್ತಿರುವ ಕೇಂದ್ರಗಳು ತಮ್ಮ ಅಬ್ಬರದ ಜಾಹಿರಾತುಗಳಿಂದ ಕೇವಲ ಮೆಡಿಕಲ್ ಅಥವಾ ಇಂಜಿನೀಯರಿಂಗ್‌ಗಳೇ ಉತ್ತಮ ಶಾಖೆಗಳು ಎಂಬ ತಪ್ಪು ಕಲ್ಪನೆಯನ್ನು ಮಕ್ಕಳಿಗೆ ನೀಡುತ್ತಿವೆ. ಉಳಿದ ಶಾಖೆಗಳಲ್ಲಿ ಉತ್ತೀರ್ಣರಾಗುವುದು ಸಮಾಜದ ದೃಷ್ಟಿಯಲ್ಲಿ ಕೀಳೆಂಬ ಭಾವನೆ ಇಂದು ಪ್ರಬಲವಾಗುತ್ತಿದೆ. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಶಾಸ್ತ್ರ, ತತ್ತ್ವಶಾಸ್ತ್ರ, ವಿಜ್ಞಾನ, ಸಮಾಜಶಾಸ್ತ್ರ ಮುಂತಾದ ವಿಭಾಗಗಳನ್ನು ಮುಚ್ಚಬೇಕಾಗಿರುವ ಪರಿಸ್ಥಿತಿ ಬಂದಿರುವುದು ಶೋಚನೀಯ.

ಪ್ರತಿಯೊಂದು ಜನಾಂಗಕ್ಕೂ ತನ್ನದೇ ಆದ ಒಂದು ಆದರ್ಶವಿರುತ್ತದೆ. ಭಾರತದ ಸಂಸ್ಕೃತಿಯು ಭೋಗಕ್ಕಿಂತ ತ್ಯಾಗಕ್ಕೇ ಪ್ರಾಶಸ್ತ್ಯ ನೀಡಿದೆ. ಇದನ್ನು ಒಮ್ಮೆಗೆ ಬದಲಾಯಿಸ ಹೊರಟರೆ ವಿನಾಶವೇ ಗತಿಯಾದೀತು. ಪಾಶ್ಚಾತ್ಯದಲ್ಲಿ ಈಗಾಗಲೇ ಕಂಡುಬರುತ್ತಿರುವ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಚಾರಿತ್ರ್ಯದ ಕೊರತೆಯೇ ಕಾರಣವೆಂದು ಹೇಳಬಹುದು. ಇದನ್ನು ಸ್ಪಷ್ಟವಾಗಿ ಗುರುತಿಸಿದ್ದ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಚಾರಿತ್ರ್ಯ ಪರಿಶುದ್ಧತೆಗೆ ಭಂಗ ತರುವ ಬುದ್ಧಿ ಚತುರತೆ ಇರಕೂಡದು. ನಿಮ್ಮ (ಪಾಶ್ಚಾತ್ಯರ) ಶಕ್ತಿ, ಸಾಹಸಕ್ಕೆ ನಾನು ಮಾರುಹೋಗಿದ್ದೇನೆ. ಆದರೆ ಕೆಟ್ಟದ್ದರ ಮೇಲೆ ಗುಲಾಬಿಯ ಹೂವಿನ ರಾಶಿಯನ್ನು ಮುಚ್ಚಿ ಅದನ್ನು ಒಳ್ಳೆಯದು ಎನ್ನುವ ನಿಮ್ಮ ಸ್ವಭಾವ ನನಗೆ ಆಗದು. ಬುದ್ಧಿವಂತಿಕೆಯೆ ಪರಮ ಶ್ರೇಷ್ಠವಲ್ಲ. ನೀತಿ ಮತ್ತು ಆಧ್ಯಾತ್ಮಿಕತೆ

ಯನ್ನು ನಾವು ಗಳಿಸಬೇಕು... ಪಾಶ್ಚಾತ್ಯ ಜನಗಳ ಒಂದು ದೋಷವೇನೆಂದರೆ ಅವರಿನ್ನೂ ಯುವಕರು. ಬುದ್ಧಿಯಿಲ್ಲ, ಚಂಚಲರು ಮತ್ತು ಬೇಕಾದಷ್ಟು ಐಶ್ವರ್ಯ ಬೇರೆ ಇದೆ. ಇಂತಹ ಯಾವುದಾದರೂ ಒಂದು ಗುಣದಿಂದಲೇ ಬೇಕಾದಷ್ಟು ಅನಾಹುತ ಆಗಬಲ್ಲದು. ಇವುಗಳೆಲ್ಲ ಒಟ್ಟಿಗೇ ಸೇರಿದರೆ! ಅದಕ್ಕೇ ಜೋಪಾನವಾಗಿರಿ!" (ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪುಟ ೧೯೩).

## ಶಿಕ್ಷಣದಲ್ಲಿರಬೇಕಾದ ಮೌಲ್ಯಗಳು

ಶಿಕ್ಷಕರು ಈ ಅಂಶಗಳನ್ನು ಗಮನಿಸಿ ನಮ್ಮ ದೇಶದ ಸಂಸ್ಕೃತಿಯ ಉತ್ತಮ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಕೇವಲ ಪಠ್ಯವಿಷಯದ ಬಗ್ಗೆ ಅವರಿಗೆ ಮಾಹಿತಿ ಕೊಡದೆ ಅವರಲ್ಲಿ ಒಂದು ಆದರ್ಶ ಮಾನಸಿಕ ನಿಲುವನ್ನು, ತರ್ಕ, ವೈಚಾರಿಕತೆಗಳ ಪ್ರಖರತೆಯನ್ನು, ವೈಜ್ಞಾನಿಕ ಮನೋಭಾವನೆಯನ್ನು ಕೊಡುವುದರ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ನಾಗರಿಕ ಪ್ರಜ್ಞೆಯನ್ನು ಬೆಳೆಸಬೇಕು. ಇಂತಹ ಸಮಗ್ರ ಶಿಕ್ಷಣದಿಂದ ನಾಳೆಯ ಪ್ರಜೆಗಳಾಗಿ ಪರಿಸರ ಸಂರಕ್ಷಣೆ, ಸಾರ್ವಜನಿಕ ಆಸ್ತಿಯ ಉಳಿವು, ಆರೋಗ್ಯಕರ ಹಾಗೂ ಸ್ವಚ್ಛ ಸಮಾಜದ ವ್ಯವಸ್ಥೆಗಾಗಿ ಹೋರಾಡುವ, ದುಡಿಯುವ ನಾಗರಿಕರು ತಯಾರಾಗುತ್ತಾರೆ. ಶಿಕ್ಷಣವು ಸಾಮಾಜಿಕ ಬದಲಾವಣೆಯ ಅಸ್ತ್ರವಾಗಬೇಕು. ಶಿಕ್ಷಕರು ಪ್ರಜ್ಞಾವಂತ ನಾಗರಿಕರ ಸೇನೆಯನ್ನು ತಯಾರಿಸುವ ಮುಖಂಡರಾಗಬೇಕು. ಭ್ರಷ್ಟಾಚಾರದ ವಿರುದ್ಧ, ಕೋಮುವಾದದ ವಿರುದ್ಧ, ಜಾತೀಯತೆಯ ವಿರುದ್ಧ ಹೋರಾಡುವ, ರಾಷ್ಟ್ರದ ಹಿತಚಿಂತನೆಯನ್ನು ಮಾಡುವ ನಾಗರಿಕರನ್ನು ರೂಪಿಸುವಲ್ಲಿ ಶಿಕ್ಷಕರದೇ ಪ್ರಮುಖ ಪಾತ್ರವೆಂದರೆ ತಪ್ಪಾಗಲಾರದು.

ಶಿಕ್ಷಣ ವ್ಯವಸ್ಥೆಯು ನೀಡುವ ಮಾಹಿತಿಯನ್ನು ಸರಿಯಾಗಿ ಬಳಸಿಕೊಳ್ಳುವ ಅರಿವು, ಪ್ರೌಢಿಮೆ ಮಕ್ಕಳಿಗೆ ಇರಬೇಕು. ಚಲನಚಿತ್ರಗಳಲ್ಲಿ ಪ್ರದರ್ಶಿಸುವ ಅಸಹಜ ಬದುಕೇ ಇವರ ಮನಸ್ಸನ್ನು ಆವರಿಸಿರುತ್ತದೆ. ಅದನ್ನು ಅನುಕರಣೆ ಮಾಡುತ್ತ ಅನಾಹುತಕ್ಕೆ ಒಳಗಾಗುತ್ತಾರೆ ಎಂಬುದು ಅನೇಕ ಘಟನೆಗಳ ಮೂಲಕ ಸಾಬೀತಾಗಿದೆ. ಆದ್ದರಿಂದ ಶಿಕ್ಷಣದೊಂದಿಗೆ ಉದಾತ್ತ ಧ್ಯೇಯಗಳನ್ನೂ, ಮೌಲ್ಯಗಳನ್ನೂ ನಿಜಜೀವನದಲ್ಲಿ ಸಂಯಮದಿಂದ ಜೀವಿಸಿರುವವರ ಉತ್ತಮ ನಿದರ್ಶನಗಳನ್ನೂ ನೀಡುವತ್ತ ಶಿಕ್ಷಣ ವ್ಯವಸ್ಥೆ ಗಮನ ಹರಿಸಬೇಕು. ಆಗ ಮಾತ್ರ ಸಮತೋಲನವಿರುವ ಶಿಕ್ಷಣ ಸಾಧ್ಯವಾಗುತ್ತದೆ.

## ಮನನ-ಮಾನ್ಯ

### ಕಲಿವುದಕೆ ಕೊನೆಯಿಲ್ಲ

ನಮ್ಮ ಮಕ್ಕಳು ವಿದ್ಯಾವಂತರಾಗಬೇಕು ಎಂಬುದೇ ಹೊಣೆಯರಿತ ಎಲ್ಲ ತಾಯಿ-ತಂದೆಯರ ಅಪೇಕ್ಷೆ. ಅದಕ್ಕಾಗಿ ಒಳ್ಳೆಯ ಶಾಲೆಯನ್ನು ಹುಡುಕಿಕೊಂಡು ಹೋಗುತ್ತಾರೆ. ಒಳ್ಳೆಯ ಶಾಲೆ ಎಂದರೆ ಒಳ್ಳೆಯ ಗುರುಗಳಿರುವ ಶಾಲೆ. ಶ್ರೇಷ್ಠವಾದ ಜ್ಞಾನ ಸಂಪಾದನೆ ಒಂದು ಗುರಿಯಾದರೆ ಲೌಕಿಕವಾಗಿ ಗೌರವಯುತವಾದ ಸುಖವಾದ ಬದುಕಿಗೆ ಅಗತ್ಯವಾದ ಹಣ ಸಂಪಾದನೆ ಇನ್ನೊಂದು ಗುರಿ. ಶಿಕ್ಷಣ ಎಂದಾಗ ಕಲಿಸುವುದಕ್ಕಿಂತ ಕಲಿಯುವುದು ಮುಖ್ಯ. ಕಲಿಯುವುದು ಮನುಷ್ಯನ ವಿಶೇಷ ಗುಣ. ಕಲಿಯುತ್ತ ಬೆಳೆಯುತ್ತೇವೆ. ಕಲಿಕೆಗೆ ಕೊನೆ ಇಲ್ಲ. ಹುಟ್ಟಿದ ಕೂಡಲೆ ಆರಂಭವಾಗುವ ಕಲಿಯುವಿಕೆ ಬದುಕಿರುವವರೆಗೂ ಸತತವಾಗಿ ನಡೆಯುತ್ತಲೆ ಇರುತ್ತದೆ. ಪುಸ್ತಕಗಳನ್ನು ಓದಿ ಕಲಿಯುತ್ತೇವೆ, ದೊಡ್ಡವರನ್ನು ನೋಡಿ ಕಲಿಯುತ್ತೇವೆ, ಜೀವನ ದಿಂದ, ಸುತ್ತಣ ನಿಸರ್ಗದಿಂದ, ಕಲಿಯುವುದೂ ಬೇಕಾದಷ್ಟಿದೆ. ಕಲಿಯುವ ಆಸಕ್ತಿ ಇರುವವರು ಸುತ್ತಮುತ್ತಲ ಜಗತ್ತಿನ ಎಲ್ಲದರಿಂದಲೂ ಕಲಿಯುತ್ತಿರುತ್ತಾರೆ. ಇಷ್ಟು ಕಲಿತಾಯಿತು, ಇನ್ನು ಕಲಿಯುವುದು ಏನೂ ಇಲ್ಲ ಎಂದ ಕ್ಷಣ ಕಲಿಕೆ-ಬೆಳವಣಿಗೆ ನಿಂತುಹೋಗುತ್ತವೆ.

ಅಕ್ಕರವು ಲೇಖಕ್ಕೆ ತರ್ಕ ತಾ ವಾದಕ್ಕೆ
ಮಿಕ್ಕ ಓದುಗಳು ತಿರುಪೆಗೆ ಮೋಕ್ಷಕ್ಕೆರ
ಡಕ್ಕರವೆ ಸಾಕು ಸರ್ವಜ್ಞ॥

ತಿರುಪೆಗೆ ಎಂದರೆ ಉದ್ಯೋಗ-ಉದರಂಭರಣಗಳಿಗೆ; ಮೋಕ್ಷಕ್ಕೆ ಶಿವ, ಹರ, ರಾಮ, ಕೃಷ್ಣ ಮುಂತಾದ ಎರಡಕ್ಷರದ ಭಗವನ್ನಾಮ! ಕಲಿಯುವುದಕ್ಕೆ ಗ್ರಂಥಗಳನ್ನೇ ಓದಬೇಕಾಗಿಲ್ಲ. ಶಾಲೆ-ಕಾಲೇಜುಗಳಲ್ಲೆ ವ್ಯಾಸಂಗ ಮಾಡಬೇಕೆಂದಿಲ್ಲ. ಜೀವನವೇ ಸಾಕು. ದಿನನಿತ್ಯದ ಅನುಭವಗಳಿಂದ ಕಲಿಯುವ, ಕಲಿತು ಉನ್ನತ ಮನೋಧರ್ಮವನ್ನು ರೂಪಿಸಿಕೊಳ್ಳುವ ಸಂಸ್ಕಾರ ಇರಬೇಕು, ಮೂಲತಃ. ಜೀವನದ ಶ್ರೇಷ್ಠವಾದ ಪಾಠ ಕಲಿಸಲು ಒಂದು ಸಾಧಾರಣ ಹೂವು ಸಾಕು ಎನ್ನುವ ವರ್ಡ್ಸ್‌ವರ್ತ್ ಕವಿ ಉದ್ಗರಿಸುತ್ತಾನೆ:

One impulse from a Vernal Wood
May teach you more of man;
Of moral, evil and of good
Than all the sages can!

(ಜೀವನದ ಅರ್ಥ-ಸಾರ್ಥಕತೆಗಳ ಬಗ್ಗೆ, ಒಳಿತು-ಕೆಡುಕುಗಳ ಬಗ್ಗೆ ತಿಳಿಯಲು, ಎಲ್ಲಾ ಸಾಧುಸಂತರ ವಾಣಿಗಿಂತಲೂ, ಮಿಗಿಲು ಕಾನನಾಂತರದ ಚೆಲುವು ಮಾಡುವ ಭಾವ ಪರಿಶುದ್ಧಿ)

ತೆರೆದ ಕಿವಿ, ತೆರೆದ ಕಣ್ಣು, ತೆರೆದ ಮನ ಇದ್ದರೆ ಸುತ್ತಣ ಸೀಮಿತ ವಲಯದಿಂದಲೇ ಬೇಕಾದಷ್ಟು ಕಲಿಯಬಹುದು. ಹೃದಯ ಸಂಪುಷ್ಟಿ-ಸಂತುಷ್ಟಿಗಳಿಗೆ, ಆತ್ಮವಿಕಾಸಕ್ಕೆ ಎಂದೂ ಕುಂದದ ಕುತೂಹಲ-ವಿಸ್ಮಯಗಳಿದ್ದರೆ, ಒಂದು ಸಾಧಾರಣ ಸಂಗತಿಯಿಂದಲೂ ರಸ ಸತ್ವವನ್ನು ಹೀರಬಹುದು. ಆಗ ಪಡೆಯುವ ಪ್ರತಿಯೊಂದು ಅನುಭವವೂ ನಮ್ಮ ಹೃದಯವನ್ನು ಪರಿಪಾಕಗೊಳಿಸಿ ಶ್ರೀಮಂತವಾಗಿಸುತ್ತದೆ.

—ಮಧುಪ